FEBRUARY 20, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ತುಂಗಭದ್ರಾ ನದಿಯ, 30 ಟಿ.ಎಂ.ಸಿ. ನೀರಿನ ಸದ್ಬಳಕೆ; ಆಂಧ್ರ ಹಾಗೂ ತೆಲಂಗಾಣ ಸಚಿವರ ಜೊತೆ, ಡಿ.ಕೆ. ಶಿವಕುಮಾರ, ಸಮಾಲೋಚನೆ.**
- **ಕಬ್ಬು ಕಟಾವಿಗೆ, ರಾಜ್ಯಾದ್ಯಂತ ಏಕರೂಪ ದರ ನಿಗದಿಗೆ, ಸದ್ಯದಲ್ಲೇ ಕೃಷಿ ಸಚಿವ, ಎನ್. ಚಲುವರಾಯಸ್ವಾಮಿ, ಸಭೆ.**
- **ರಾಜ್ಯದ ಹಲವೆಡೆ ಕಾಡ್ಗಿಚ್ಚು; ಕಟ್ಟೆಚ್ಚರ ವಹಿಸಿ, ಅರಣ್ಯ ಸಂಪತ್ತು ರಕ್ಷಿಸಿ – ಪರಿಸರವಾದಿ ಸುರೇಶ ಹೆಬ್ಳೀಕರ, ಆಗ್ರಹ.**
- **ಸಂಸದರ ಸಾಂಸ್ಕೃತಿಕ ಮಹೋತ್ಸವ; ಹುಬ್ಬಳ್ಳಿಯಲ್ಲಿ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ ಹಾಗೂ ಕುಸ್ತಿ ಪಂದ್ಯಾವಳಿ.**

<><><>

**ಈಗ ವಾರ್ತೆಗಳ ವಿವರ**

<><><>

**ತುಂಗಭದ್ರಾ ನದಿಯ, 30 ಟಿ.ಎಂ.ಸಿ. ಅಡಿ ನೀರನ್ನು ಉಳಿಸಿ, ಸದ್ಬಳಕೆ ಮಾಡಿಕೊಳ್ಳಲು, ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ, ರಾಜಸ್ಥಾನದ ಉದಯಪುರದಲ್ಲಿ, ಆಂಧ್ರ ಪ್ರದೇಶ ಹಾಗೂ ತೆಲಂಗಾಣದ ಜಲ ಸಂಪನ್ಮೂಲ ಖಾತೆ ಸಚಿವರ ಜೊತೆ ಚರ್ಚೆ ನಡೆಸಿದ್ದಾಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಉದಯಪುರದಲ್ಲಿ ಆಯೋಜಿಸಿದ್ದ, ರಾಜ್ಯಗಳ ಜಲ ಸಂಪನ್ಮೂಲ ಖಾತೆ ಸಚಿವರ, ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಪಾಲ್ಗೊಂಡಿದ್ದರು. ಕೇಂದ್ರ ಜಲಶಕ್ತಿ ಖಾತೆ ಸಚಿವರು, ಇದೇ 25 ರಂದು ಹೊಸ ದಿಲ್ಲಿಯಲ್ಲಿ ಭೇಟಿಗೆ ಕಾಲಾವಕಾಶ ನೀಡಿದ್ದಾರೆ. ಮಹಾದಾಯಿ, ಮೇಕೆದಾಟು, ಕೃಷ್ಣ ಮೇಲ್ದಂಡೆ ಹಾಗೂ ಭದ್ರಾ ನೀರಾವರಿ ಯೋಜನೆಗಳ ಬಗ್ಗೆ, ವಿಸ್ತೃತ ಚರ್ಚೆ ನಡೆಸುವುದಾಗಿ, ಸುದ್ದಿಗಾರರಿಗೆ ತಿಳಿಸಿದರು.**

<><><>

**ಕಬ್ಬು ಕಟಾವಿಗೆ, ರಾಜ್ಯಾದ್ಯಂತ ಒಂದೊಂದು ರೀತಿಯಲ್ಲಿ, ರೈತರಿಂದ ಕಾರ್ಖಾನೆಗಳು, ದರ ವಸೂಲಿ ಮಾಡುತ್ತಿದ್ದು, ಸದ್ಯದಲ್ಲೇ ಸಭೆ ನಡೆಸಿ, ಏಕರೂಪ ದರ ನಿಗದಿಪಡಿಸಲಾಗುವುದು ಎಂದು, ಕೃಷಿ ಖಾತೆ ಸಚಿವ ಎನ್.**

ಚಲುವರಾಯಸ್ವಾಮಿ ತಿಳಿಸಿದ್ದಾರೆ. ಮಂಡ್ಯದ ಜಿಲ್ಲಾ ಪಂಚಾಯ್ತಿಯ, ಕಾವೇರಿ ಸಭಾಂಗಣದಲ್ಲಿ, ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳು ಹಾಗೂ ರೈತರೊಂದಿಗೆ, ಅವರು ಸಭೆ ನಡೆಸಿದರು. ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರ ಮೇಲೆ ಅವಲಂಬಿತವಾಗಿದ್ದು, ರೈತರ ಸಂಕಷ್ಟದ ಅರಿವಿರಬೇಕು. ಮುಂದಿನ 14 ದಿನದೊಳಗಾಗಿ, ಕಬ್ಬಿನ ಹಣ ಪಾವತಿಸಬೇಕು. ತಪ್ಪಿದಲ್ಲಿ, ಕಾನೂನು ಕ್ರಮ ಎದುರಿಸಲು ಸಿದ್ಧರಾಗುವಂತೆ, ಸಚಿವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

<><><>

ದೇಶದ ಶೇಕಡ 25 ರ ಷ್ಟು ಗೋಡಂಬಿಯ ಸಂಸ್ಕರಣೆ, ಕರ್ನಾಟಕದಲ್ಲಿ ಆಗುತ್ತಿದೆ. ಗುಣಮಟ್ಟ ಖಾತ್ರಿ, ನಿಯಮಿತ ಮಾರುಕಟ್ಟೆ ಹಾಗೂ ಬೆಲೆ ಸ್ಥಿರತೆಗಾಗಿ, ವಿದೇಶದಿಂದ ಗೋಡಂಬಿ ಆಮದನ್ನು, ಶೇಕಡ 75 ರಿಂದ 50ಕ್ಕೆ ಇಳಿಸಬೇಕಿದೆ ಎಂದು, ರಾಜ್ಯ ಗೋಡಂಬಿ ತಯಾರಕರ ಸಂಘದ ಅಧ್ಯಕ್ಷ, ದಕ್ಷಿಣಕನ್ನಡ ಜಿಲ್ಲೆ ಮೂಡಬಿದಿರೆಯ, ಅನಂತಕೃ ್ಣ ರಾವ್ ಹೇಳಿದ್ದಾರೆ. ಗೋಡಂಬಿ ಬೆಲೆ ಸ್ಥಿರತೆ ಹಾಗೂ ಬೆಳೆಗಾರರಿಗೆ 18 ರಾಜ್ಯ ಸರ್ಕಾರಗಳ ಪ್ರೋತ್ಸಾಹ, ದೇಶದಲ್ಲಿ ಗೋಡಂಬಿ ಉತ್ಪಾದನೆಯನ್ನು ಹೆಚ್ಚಿಸಿ, ರಫ್ತು ಸಹ ಸಾಧ್ಯವಾಗಿಸುತ್ತದೆ ಎಂದು, ಅವರು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಅನಂತ ಕೃಷ್ಣ ರಾವ್ ಧ್ವನಿ 45 ಸೆಕೆಂದುಗಳು

<><><>

ಮಹಾತ್ಮ ಗಾಂಧಿ ಅವರ ವಿಚಾರಗಳನ್ನು ಯುವಜನತೆ ಮೈಗೂಡಿಸಿಕೊಳ್ಳಬೇಕು. ದೇಶದ ತಲಸ್ಪರ್ಷಿ ಹಾಗೂ ಸರ್ವಸ್ಪರ್ಷಿ ಪರಿವರ್ತನೆಗಾಗಿ, ಶ್ರಮಿಸಬೇಕು ಎಂದು,  ಗದಗ ಜಿಲ್ಲಾ ಉಸ್ತುವಾರಿ ಸಚಿವ, ಎಚ್.ಕೆ. ಪಾಟೀಲ ಹೇಳಿದ್ದಾರೆ. ಗದಗ ನಾಗಾವಿಯ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ, ದತ್ತು ಗ್ರಾಮ, ಗಂಗೋತ್ರಿಯಲ್ಲಿ ಆಯೋಜಿತ, ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ, ಗಾಂಧೀಜಿಯವರ ಮೂಲ ಕೃತಿಗಳ, ಅನುವಾದಿತ ಪುಸ್ತಕಗಳನ್ನು, ಬಿಡುಗಡೆಗೊಳಿಸಿ ಅವರು, ಮಾತನಾಡಿದರು. ಜಿಲ್ಲೆಯ ಕಣಗಿನಹಾಳ ಗ್ರಾಮ, ಗಾಂಧೀಜಿಯವರ ಸಹಕಾರ ಚಳವಳಿಯ ಪರಿಕಲ್ಪನೆಯಲ್ಲಿ, ಉದಯವಾಗಿದೆ ಎಂದರು.

<><><>

ಅನ್ನ ಭಾಗ್ಯ ಯೋಜನೆ ಅಡಿ, ಹಣದ ಬದಲು, ಅಕ್ಕಿ ನೀಡಲು, ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು, ಆಹಾರ ಖಾತೆ ಸಚಿವ ಕೆ.ಎಚ್.ಮುನಿಯಪ್ಪ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ, 22 ರೂಪಾಯಿ 50 ಪೈಸೆ ದರದಲ್ಲಿ, ಅಕ್ಕಿ ಸರಬರಾಜು ಮಾಡಲು ಒಪ್ಪಿಗೆ ಸೂಚಿಸಿದೆ. ಈ ತಿಂಗಳಿನಿಂದಲೇ, ನ್ಯಾಯಬೆಲೆ ಅಂಗಡಿ ಮೂಲಕ, ಗ್ರಾಹಕರಿಗೆ 10 ಕಿಲೋ ಅಕ್ಕಿ ವಿತರಿಸಲು ತೀರ್ಮಾನಿಸಲಾಗಿದೆ ಎಂದು, ಸ್ಪ ್ಟಪಡಿಸಿದರು.

<><><>

ರಾಜ್ಯ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಸದ್ಯದಲ್ಲೇ ಸಾವಿರ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಿದೆ ಎಂದು, ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಈ ವಿಷಯ ತಿಳಿಸಿದ ಅವರು, ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ, 2 ಸಾವಿರಕ್ಕೂ ಅಧಿಕ ಮನೆ ನಿರ್ಮಾಣ ಹಂತದಲ್ಲಿವೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಗದಗ ಜಿಲ್ಲೆ, ಮುಂಡರಗಿ ತಾಲೂಕು, ಕಪ್ಪತಗುಡ್ಡದಲ್ಲಿ ನಂದಿವೇರಿ ಮಠದ ಬಂಗಾರಕೊಳ್ಳದ ಹಳ್ಳದ ಬಳಿ, ಕಿಡಿಗೇಡಿಗಳು ಉದ್ದೇಶ ಪೂರ್ವಕ ಹಚ್ಚಿದ ಬೆಂಕಿ, ಕಾಡ್ಗಿಚ್ಚಾಗಿ ಹಬ್ಬಿ, ಸಾವಿರ ಎಕರೆದಷ್ಟು, ಔಷಧೀಯ ಸಸ್ಯಗಳ ಅಮೂಲ್ಯ ಕಾಡು, ಸುಟ್ಟು ಕರಕಲಾಗಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಮುಳ್ಳಯ್ಯನಗಿರಿ ಪರ್ವತ ಶ್ರೇಣಿಯ, ಚಂದ್ರದ್ರೋಣ ಪರ್ವತದಲ್ಲಿ, ಕಾಡ್ಗಿಚ್ಚು ಹಬ್ಬಿ, 25 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ನಾಶವಾಗಿದೆ.

<><><>

ಸೀತಾಳಯ್ಯನಗಿರಿ ಸಮೀಪದ ಬೆಟ್ಟಕ್ಕೆ, ಬೆಂಕಿ ತಗುಲಿದ ಪರಿಣಾಮ, ಇತ್ತೀಚೆಗೆ ಹಲವು ಎಕರೆ ಔಷಧೀಯ ಸಸ್ಯಗಳು, ಬೆಂಕಿಗೆ ಆಹುತಿಯಾಗಿವೆ. ಹುಬ್ಬಳ್ಳಿಯ ನೃಪತುಂಗ ಬೆಟ್ಟದಲ್ಲಿ ಬೆಂಕಿ ತಗುಲಿ, ಶ್ರೀಗಂಧದ ಮರಗಳು ಸೇರಿದಂತೆ, ಹಲವು ಎಕರೆ ನೆಡುತೋಪು ಸುಟ್ಟಿದೆ.

<><><>

ಹಿರಿಯ ಪರಿಸರ ವಾದಿ, ಡಾಕ್ಟರ್ ಸುರೇಶ ಹೆಬ್ಳೀಕರ, ನಾಡಿನಾದ್ಯಂತ ಕಾಡಂಚಿನಲ್ಲಿ ಹೆಚ್ಚುತ್ತಿರುವ ಕಾಡ್ಗಿಚ್ಚಿನ ಪ್ರಕರಣಗಳ ಬಗ್ಗೆ, ಕಳವಳ ವ್ಯಕ್ತ ಪಡಿಸಿ, ಜನ ಸಹಭಾಗಿತ್ವದಲ್ಲಿ, ಬೇಸಿಗೆಯಲ್ಲಿ ಗಂಭೀರ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ, ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

<><><>

ಸುರೇಶ ಹೆಬ್ಳೀಕರ ಧ್ವನಿ 50 ಸೆಕೆಂದುಗಳು

<><><>

ಸಂಸದರ ಸಾಂಸ್ಕೃತಿಕ ಮಹೋತ್ಸವದ ಅಂಗವಾಗಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಅವರು, ಇಂದು ಮತ್ತು ನಾಳೆ, ಹುಬ್ಬಳ್ಳಿಯ ಕುಸುಗಲ್ ರಸ್ತೆಯ, ಆಕ್ಸ್‌ಫರ್ಡ್ ಕಾಲೇಜು ಹಿಂಭಾಗದ ಮೈದಾನದಲ್ಲಿ, ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ, ಕುಸ್ತಿ ಪಂದ್ಯಾವಳಿ, ಗ್ರಾಮೀಣ ಕ್ರೀಡೆ ಹಾಗೂ ಮಲ್ಲಕಂಬ ಪ್ರದರ್ಶನ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸಿದ್ದಾರೆ. ಇಂದು ಬೆಳಗ್ಗೆ 10 ಗಂಟೆಗೆ, ಗಾಳಿಪಟ ಉತ್ಸವ ಉದ್ಘಾಟನೆಗೊಳ್ಳಲಿದೆ. ನಾಳೆ ಬೆಳಗ್ಗೆ 9.30ಕ್ಕೆ, ದೇಶ-ವಿದೇಶಗಳ ಹೆಸರಾಂತ ಗಾಳಿಪಟ ಹಾರಾಟ ತಜ್ಞರು ಪ್ರದರ್ಶನ ನೀಡಲಿದ್ದಾರೆ.

<><><>

ಕವಿ ಚಕ್ರವರ್ತಿ ರನ್ನ ವೈಭವ ಉತ್ಸವದ, 'ರನ್ನರಥ'ಕ್ಕೆ, ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ, ನಾಡದೇವಿ ಭುವನೇಶ್ವರಿ ಪ್ರತಿಮೆ ಮುಂಭಾಗದಲ್ಲಿ, ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ, ಆರ್.ಬಿ. ತಿಮ್ಮಾಪೂರ ಚಾಲನೆ ನೀಡಿದರು. ಇದೇ 22, 23 ಹಾಗೂ 24 ರಂದು, ಮುಧೋಳ ಹಾಗೂ ಬೆಳಗಲಿಯಲ್ಲಿ, ಕವಿ ಚಕ್ರವರ್ತಿ ರನ್ನ ವೈಭವ ಕಾರ್ಯಕ್ರಮ, ವಿಜೃಂಭಣೆಯಿಂದ ಜರುಗಲಿದೆ.

<><><>

ಕಲಬುರಗಿಯ ಶ್ರೀ ಶರಣಬಸವೇಶ್ವರ ದೇವಸ್ಥಾನದ ಜಾತ್ರೆ ಮೈದಾನದಲ್ಲಿ, ಇದೇ 24 ರಿಂದ ಮಾರ್ಚ್ 5ರ ವರೆಗೆ, 10 ದಿನಗಳ, ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿದ ವಸ್ತುಗಳ, ರಾಷ್ಟ್ರ ಮಟ್ಟದ ಪ್ರದರ್ಶನ ಮತ್ತು ಮಾರಾಟ ಮೇಳ ಜರುಗಲಿದೆ. ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಮಾಹಿತಿ ನೀಡಿ, 'ನಮ್ಮ ಸರಸ್ ರಾಷ್ಟ್ರೀಯ ಮೇಳ– 2025' ಕ್ಕೆ, ದೇಶದ ವಿವಿಧ ರಾಜ್ಯಗಳಿಂದ, 2 ಸಾವಿರಕ್ಕೂ ಹೆಚ್ಚು, ಸ್ವ–ಸಹಾಯ ಗುಂಪುಗಳ ಮಹಿಳೆಯರು, ತಮ್ಮ ಕರಕುಶಲ ವಸ್ತುಗಳೊಂದಿಗೆ ಭಾಗವಹಿಸಲಿದ್ದಾರೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಛತ್ರಪತಿ ಶಿವಾಜಿ ಮಹಾರಾಜರ 395ನೇ ಜನ್ಮ ದಿನಾಚರಣೆಯನ್ನು, ದೇಶಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು.

<><><>

ಕಲಬುರಗಿಯಲ್ಲಿ ಇಂದು ಆಯೋಜಿತ, ಸಂತ ಕವಿ, ಶ್ರೀ ಸರ್ವಜ್ಞ ಜಯಂತಿಯಲ್ಲಿ, ಮಲ್ಲಿಕಾರ್ಜುನ ಖರ್ಗೆ ಪಾಲ್ಗೊಳ್ಳಲಿದ್ದಾರೆ.

<><><>

ಇಂದು ವಿಶ್ವ ಸಾಮಾಜಿಕ ನ್ಯಾಯ ದಿನ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 2007ರಲ್ಲಿ ನಿರ್ಣಯಿಸಿದಂತೆ, ಎಲ್ಲರಿಗೂ ಸಮಾನ ಮತ್ತು ನ್ಯಾಯಯುತ ಅವಕಾಶ ಖಾತ್ರಿ ಪಡಿಸುವ ದಿನಾಚರಣೆ.

<><><>

ಧಾರವಾಡದ ವನಿತಾ ಸೇವಾ ಸಮಾಜ, ಸಂಸ್ಥಾಪನಾ ದಿನಾಚರಣೆ ಇಂದು ಬೆಳಗ್ಗೆ 10.30ಕ್ಕೆ, ಧಾರವಾಡ ರಾಮನಗರದ, ವನಿತಾ ಸೇವಾ ಸಮಾಜ ಆವರಣದಲ್ಲಿ ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ತುಂಗಭದ್ರಾ ನದಿಯ, 30 ಟಿ.ಎಂ.ಸಿ. ನೀರಿನ ಸದ್ಬಳಕೆ: ಆಂಧ್ರ ಹಾಗೂ ತೆಲಂಗಾಣ ಸಚಿವರ ಜೊತೆ, ಡಿ.ಕೆ. ಶಿವಕುಮಾರ, ಸಮಾಲೋಚನೆ.
- ಕಬ್ಬು ಕಟಾವಿಗೆ, ರಾಜ್ಯಾದ್ಯಂತ ಏಕರೂಪ ದರ ನಿಗದಿಗೆ, ಸದ್ಯದಲ್ಲೇ ಕೃಷಿ ಸಚಿವ, ಎನ್. ಚಲುವರಾಯಸ್ವಾಮಿ, ಸಭೆ.
- ರಾಜ್ಯದ ಹಲವೆಡೆ ಕಾಡ್ಗಿಚ್ಚು; ಕಟ್ಟೆಚ್ಚರ ವಹಿಸಿ, ಅರಣ್ಯ ಸಂಪತ್ತು ರಕ್ಷಿಸಿ – ಪರಿಸರವಾದಿ ಸುರೇಶ ಹೆಬ್ಳೀಕರ, ಆಗ್ರಹ.
- ಸಂಸದರ ಸಾಂಸ್ಕೃತಿಕ ಮಹೋತ್ಸವ: ಹುಬ್ಬಳ್ಳಿಯಲ್ಲಿ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ ಹಾಗೂ ಕುಸ್ತಿ ಪಂದ್ಯಾವಳಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.